# ‘ನಾನು ಡಬ್ಬಿಂಗ್ ವಿರೋಧಿ’

## ಎಸ್. ದಿಲೀಪ್ ರಾಜ್

ಝೀ ಕನ್ನಡದ ‘ಹಿಟ್ಲರ್ ಕಲ್ಯಾಣ’ ಅಭಿರಾಮ್ ಜಯಶಂಕರ್ (ಎಜೆ)

◆ **‘ಹಿಟ್ಲರ್ ಕಲ್ಯಾಣ’ ಹೆಸರಿನ ಹಿನ್ನೆಲೆ ಏನು?**

ಹಿಟ್ಲರ್ ಎಂಬ ಹೆಸರು ಹೊಸತೇನೂ ಅಲ್ಲ. ಆ ಹೆಸರು ಕೇಳಿದ ತಕ್ಷಣ ಕಣ್ಣೆದುರಿಗೆ ಕಾಣುವ ದೃಶ್ಯ ಭಯಾನಕವಾಗಿರುತ್ತದೆ. ಏಕೆಂದರೆ ಆತನೊಬ್ಬ ನಿರಂಕುಶ ಪ್ರಭು. ಅಂತಹ ಹೆಸರಿನ ಪಾತ್ರಕ್ಕೆ ಕಲ್ಯಾಣ ಮಾಡಿದರೆ ಹೇಗೆ ಎಂಬ ಕುತೂಹಲ ಹುಟ್ಟಿಕೊಳ್ಳುತ್ತದೆ. ನನಗೂ ವಾವ್ ಚೆನ್ನಾಗಿದೆ ಎಂದೇ ಅನಿಸಿತು. ಧಾರಾವಾಹಿ ನಾಮಕರಣ ಕೂಡ ಸ್ವಾರಸ್ಯಕರವಾಗಿದೆ. ನಾವೆಲ್ಲರೂ ‘ಹಿಟ್ಲರ್ ಕಲ್ಯಾಣ’ಕ್ಕೆ ವೋಟ್ ಮಾಡಿ ಅಂತಿಮಗೊಳಿಸಿದೆವು. ಧಾರಾವಾಹಿಯ ಹೆಸರಿಗೆ ಸಾಕಷ್ಟು ಅವಕಾಶಗಳು ಇದ್ದವು. ಇದು ಹಿಂದಿಯ ರಿಮೇಕ್ ಕಥೆ. ಅಲ್ಲಿ ಬೇರೆಯ ಹೆಸರನ್ನೇ ಇಟ್ಟಿದ್ದಾರೆ. ಸಾಮಾನ್ಯವಾಗಿ ಪುರುಷ ಪ್ರಧಾನ ಹೆಸರಿನ ಧಾರಾವಾಹಿಗಳು ತೀರಾ ಕಡಿಮೆ. ನಾಯಕಿ ಹೆಸರಿನಲ್ಲಿ ಧಾರಾವಾಹಿಗೆ ಹೆಸರಿಡಬೇಕಾ ಎಂಬ ಚರ್ಚೆಯೂ ನಡೆದಿತ್ತು. ಇನ್ನೂ ಬೇರೆ ಹೆಸರುಗಳ ಬಗ್ಗೆ ಯೋಚಿಸಿದೆವು. ಹಿಟ್ಲರ್ ಆಕರ್ಷಣೀಯವಾಗಿರುತ್ತದೆ ಎನ್ನುವ ಕಾರಣಕ್ಕೆ ಇದೇ ಹೆಸರು ಅಂತಿಮವಾಯಿತು.

◆ **ಸ್ವಂತ, ರಿಮೇಕ್, ಡಬ್ಬಿಂಗ್ ಮೂರು ಬಗೆಯ ಧಾರಾವಾಹಿಗಳು ಬರುತ್ತಿವೆ. ಒಬ್ಬ ಕಲಾವಿದರಾಗಿ ಈ ಬಗ್ಗೆ ಏನು ಹೇಳುತ್ತೀರಿ?**

ವೈಯಕ್ತಿಕವಾಗಿ ನಾನು ಸೃಜನಶೀಲತೆಗೆ ಮೊದಲ ಆದ್ಯತೆ ಕೊಡುತ್ತೇನೆ. ಮೂಲಭಾವ– ಮೂಲಕಥೆ ಇಷ್ಟ ಆಗುತ್ತವೆ. ಅದರಲ್ಲಿ ಸರಿ– ತಪ್ಪು ಏನೇ ಇದ್ದರೂ ಹೊಸತರ ಮಿಡಿತ ಇರುತ್ತದೆ. ನಮ್ಮದು, ನಮ್ಮತನ ಎನ್ನುವುದನ್ನು ಅಲ್ಲಿ ಕಾಣಬಹುದು. ನಮ್ಮ ವಾತಾವರಣ ಮತ್ತು ಸಂಸ್ಕೃತಿಗೆ ತಕ್ಕಂತೆ ನಮ್ಮ ಯೋಚನೆ ನಿರ್ಮಿತವಾಗಿರುತ್ತದೆ. ಅದನ್ನು ಮೀರಿ ನಾವೇನೂ ಯೋಚಿಸುವುದಿಲ್ಲ. ಹಾಗಾಗಿ ಸ್ವಂತಿಕೆಯನ್ನು ಮೆಚ್ಚುತ್ತೇನೆ. ರಿಮೇಕ್ ವಿಷಯಕ್ಕೆ ಬಂದರೆ ಒಂದು ಭೂಮಿಕೆ ಇರುತ್ತದೆ, ಅದರ ಮೇಲೊಂದು ನಮ್ಮ ನೆಲೆ ಆವಿರ್ಭವಿಸುತ್ತದೆ. ಮೂಲ ಕಥೆಯ ಅಸ್ಥಿಪಂಜರಕ್ಕೆ ದೇಸಿಯತೆಯ ಜೀವ ತುಂಬಿ ನಮ್ಮ ಸೊಗಡಿಗೆ ಅದನ್ನು ಹೊಂದಿಸುತ್ತೇವೆ. ಪಾತ್ರ– ಕಥೆ– ಸನ್ನಿವೇಶವನ್ನು ಬೇಕಾದಂತೆ ಬದಲಿಸಿಕೊಳ್ಳುತ್ತೇವೆ. ಆದರೆ ಡಬ್ಬಿಂಗ್‌ನಲ್ಲಿ ಇಂತಹ ಸ್ವಾತಂತ್ರ್ಯ ಇರುವುದಿಲ್ಲ. ವೈಯಕ್ತಿಕವಾಗಿ ನನಗೆ ಡಬ್ಬಿಂಗ್ ಇಷ್ಟ ಆಗದಿರುವುದರಿಂದ ಅದನ್ನು ವಿರೋಧಿಸುತ್ತೇನೆ.

◆ **ನಿಮ್ಮನ್ನು ನೀವು ಪರಿಚಯಿಸುವುದಾರೆ...**

ನಾನು ನಾಟಕ, ಸೀರಿಯಲ್ ನಂತರದಲ್ಲಿ ಸಿನಿಮಾ ಈ ಮೂರು ವೇದಿಕೆಯಲ್ಲಿ ದುಡಿದಿದ್ದೇನೆ. ಕಲಾವಿದನಾಗಿ ನನ್ನ ಮೊದಲ ಪ್ರಾಮುಖ್ಯತೆ ರಂಗಭೂಮಿ. ಅಲ್ಲಿ ಕೆಲಸ ಮಾಡಬೇಕು ಎನ್ನುವ ಹುಮ್ಮಸ್ಸು ಹೆಚ್ಚು. ಆ ವೇದಿಕೆ ನೀಡುವ ಅನುಭವ ಕ್ಯಾಮೆರಾ ಆಗಲಿ ಲೈಟ್ ಆಗಲಿ ನೀಡುವುದಿಲ್ಲ. ಸೀರಿಯಲ್, ಸಿನಿಮಾ ಎಂದು ಹೇಳುವುದಾದರೆ, ಒಬ್ಬ ಕಲಾವಿದನನ್ನು ಬಿಂಬಿಸುವಲ್ಲಿ ಸಿನಿಮಾ ಮುಂದೆ ನಿಲ್ಲುತ್ತದೆ. ಸಿನಿಮಾದಲ್ಲಿ ಕಲಾವಿದ ಅದ್ಧೂರಿಯಾಗಿ ಹೊರಹೊಮ್ಮುತ್ತಾನೆ. ಅದೇ ಕಾಲಾವಿದ ಮನೆ ಮಾತಾಗುವುದು, ವೀಕ್ಷಕರ ಮನಸಿಗೆ ಹತ್ತಿರವಾಗುವುದು ಧಾರಾವಾಹಿಯಲ್ಲಿ. ನನಗೆ ಇದನ್ನೇ ಮಾಡಬೇಕೆಂಬ ಉದ್ದೇಶ ಇರಲಿಲ್ಲ. ಸಿಕ್ಕ ಅವಕಾಶವನ್ನು ಖುಷಿಯಿಂದ ಮಾಡಿದ್ದೇನೆ.

◆ **ಬಣ್ಣ ಹಚ್ಚುವ ಸಂದರ್ಭ ಬಂದಿದ್ದು ಹೇಗೆ?**

ಮೂಲತಃ ನಾನು ಡಾನ್ಸರ್, ಕೋರಿಯೋಗ್ರಾಫರ್ ಆಗಬೇಕಿತ್ತು. ವೇದಿಕೆ ನನಗೆ ಹೊಸತೇನೂ ಆಗಿರಲಿಲ್ಲ. ಕಾಲೇಜು ದಿನದಲ್ಲಿ ನಾಟಕವೊಂದರಲ್ಲಿ ಬಣ್ಣ ಹಚ್ಚಬೇಕಾದ ಆಕಸ್ಮಿಕ ಸಂದರ್ಭ ಎದುರಾಯಿತು. ಆ ನಾಟಕದಲ್ಲಿ ನೃತ್ಯ ಪ್ರಧಾನ ಪಾತ್ರಕ್ಕೆ ಡಾನ್ಸರ್ ಬೇಕಿತ್ತು. ಅದನ್ನು ನಾನು ಮಾಡಿದೆ. ಶಾಲಾ ದಿನಗಳಲ್ಲೂ ಪಾತ್ರ ಮಾಡುತ್ತಿದ್ದೆ. ಆದರೆ ಅಲ್ಲಿಗೆ ಸೀಮಿತವಾಗುತ್ತಿತ್ತು. ಕಾಲೇಜು ರಂಗಭೂಮಿಯಲ್ಲಿ ಸಿಕ್ಕ ಮನ್ನಣೆ ಪ್ರೋತ್ಸಾಹದಿಂದ ಒಂದಾದ ಮೇಲೆ ಒಂದು ನಾಟಕಗಳನ್ನು ಆಡಲು ಶುರುಮಾಡಿದೆ. ಅಲ್ಲಿಂದ ನಾನು ನಟನಾದೆ. ಸೀರಿಯಲ್‌ಗೂ ಅವಕಾಶ ಸಿಕ್ಕವು. ಮೊದಲ ದಿನ ಭಯವೇನೂ ಆಗಲಿಲ್ಲ. ಪಾತ್ರ ಸಿಕ್ಕರೆ ಅದರಲ್ಲಿ ತಲ್ಲೀನ ಆಗುವುದರಿಂದ ವೇದಿಕೆ ಯಾವುದೇ ಆದರೂ ಹೆಚ್ಚಿನ ಬದಲಾವಣೆ ಅಥವಾ ವ್ಯತ್ಯಾಸ ಅಂತ ನನಗೆ ಅನಿಸುವುದಿಲ್ಲ.

◆ **ಮುಂದೆ ದಿಲೀಪ್ ಪಯಣ ಹೇಗಿರಬಹುದು...**

ಈ ಕ್ಷೇತ್ರದಲ್ಲಿ ನನ್ನನ್ನು ನಿರ್ದೇಶನ ಕೂಡ ಆಕರ್ಷಿಸಿದೆ. ಅನೇಕ ಧಾರಾವಾಹಿಯ ಆರಂಭಿಕ ಕಂತುಗಳನ್ನು ನಾನೇ ನಿರ್ದೇಶನ ಮಾಡಿದ್ದೇನೆ. ‘ಹಿಟ್ಲರ್’ನಲ್ಲಿ ಮಾಡಲು ಆಗುತ್ತಿಲ್ಲ. ಏಕೆಂದರೆ, ಅಭಿನಯದಲ್ಲಿ ಹೆಚ್ಚಿನ ಗಮನ ಕೇಂದ್ರೀಕೃತವಾಗಿದೆ. ಹಾಗಾಗಿ ದೂರ ಉಳಿದಿದ್ದೇನೆ. ನಿರ್ದೇಶನ ಮಾಡಬೇಕು ಎನ್ನುವ ಬಯಕೆ ಇದ್ದೇ ಇದೆ. ನಿರ್ದೇಶನ ಎಂದು ಆಯ್ಕೆ ಮಾಡಿಕೊಂಡರೆ ಸಿನಿಮಾದಲ್ಲಿ ಅದನ್ನು ಪ್ರಯೋಗಿಸಬೇಕು. ಕ್ಯಾನ್ವಸ್ ನನಗೆ ದೊಡ್ಡದಾಗಿ ಇರಬೇಕು.

◆ **ವೈಯಕ್ತಿಕವಾಗಿ ನೀವು ಮತ್ತು ನಿಮ್ಮ ಹೊಣೆಯ ಬಗ್ಗೆ ಹೇಳುವುದಾದರೆ...**

ದಿಲೀಪ್ ಆಗಿ ಹೆಚ್ಚು ಅಂತರ್ಮುಖಿ. ಬಿಡುವಿನ ವೇಳೆ ಹೆಚ್ಚು ಮನೆಯಲ್ಲೇ ಇರುತ್ತೇನೆ. ಸ್ನೇಹಿತರ ಜೊತೆ ಹೆಚ್ಚು ಬೆರೆಯುವುದಿಲ್ಲ. ಅಂತಹ ಸಂದರ್ಭ ಎದುರಾದರೂ ಭಾಗವಹಿಸುವುದು ತೀರಾ ಕಡಿಮೆ. ಕೆಲಸ ಇದ್ದರೆ ಮಾತ್ರ ಮನೆಯಿಂದ ಆಚೆ ಬರುತ್ತೇನೆ. ತುಂಬ ಸ್ನೇಹಿತರೂ ಇದ್ದಾರೆ. ಅವರ ಜೊತೆ ನಿಯಮಿತವಾಗಿ ಸಮಯ ಕಳೆಯಲು ಆಗುವುದಿಲ್ಲ. ಹೋಗದೇ ಇರುವುದಕ್ಕೆ ಯಾವ ನಿರ್ದಿಷ್ಟ ಕಾರಣ ಇಲ್ಲ. ಸ್ವಭಾವತಃ ನಾನಿರುವುದೇ ಹಾಗೆ. ಹೆಂಡತಿ ಮಕ್ಕಳ ಜೊತೆ ಹೆಚ್ಚು ಕಾಲ ಕಳೆಯುತ್ತೇನೆ. ಹೊಣೆಯ ವಿಷಯಕ್ಕೆ ಬಂದರೆ ಅಗತ್ಯ ಇದ್ದಲ್ಲಿ ಮೊದಲಿಗನಾಗಿ ನಿಲ್ಲಲು ಇಷ್ಟಪಡುತ್ತೇನೆ. ನನ್ನಿಂದ ಏನೋ ಒಂದು ಸಹಾಯ ಆಗುತ್ತದೆ ಎಂದರೆ ಅದಕ್ಕೆ ಹಿಂಜರಿಯದೇ ಮುಂದಿರುತ್ತೇನೆ. ಉಳಿದಂತೆ ಫಿಟ್ನೆಸ್ ತಾಲೀಮು ಮಾಡುತ್ತೇನೆ. ಕ್ರಿಕೆಟ್ ತುಂಬ ಇಷ್ಟ, ಆಗಾಗ ಆಡುತ್ತೇನೆ. ಹೋಮ್ ಥೀಟರ್‌ನಲ್ಲಿ ಸಿನಿಮಾಗಳನ್ನು ನೋಡುತ್ತೇನೆ. ಸಿನಿಮಾ– ವೆಬ್ ಸೀರಿಸ್ ತುಂಬಾನೇ ನೋಡುತ್ತೇನೆ.



■ **ರಾಘವೇಂದ್ರ ಕೆ.**